**ಸಾಕ್ಷಿಯನ್ನು ದಿನಾಂಕಃ 04-07-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಎಂ ಎಸ್ ಬಿ ವಕೀಲರವರಿಂದಃ**

ನನಗೆ ದಾವಾ ಸ್ವತ್ತಿನ ಸರ್ವೇ ನಂಬರ್ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನಗೆ ಓದಲು ಬರೆಯಲು ಬರುವುದಿಲ್ಲ ಎಂದು ನುಡಿದರು. ದಾವಾ ಸ್ವತ್ತಿನ ಪೂರ್ವಕ್ಕೆ ಹರಿಹರ ರಸ್ತೆ, ಪಶ್ಚಿಮಕ್ಕೆ ಬಸಲಿಂಗಪ್ಪನ ಖಣ, ಉತ್ತರಕ್ಕೆ ಭರಮಪ್ಪನ ಖಣ ಹಾಗೂ ದಕ್ಷಿಣಕ್ಕೆ ಪೋಲಿಸ್ ಠಾಣೆ ಇದೆ. ಸಕ್ರಿ ಗಂಗಪ್ಪ ತಂದೆ ಲೇಟ್ ಫಕೀರಪ್ಪ ಇವರು ನನಗೆ ಮಾವನಾಗಬೇಕು. ಹೊನ್ನಮ್ಮನವರ ಮಾಯವ್ವ ಗಂಡ ಲೇಟ್ ಗೋಣೆಪ್ಪ ಇವರ ಪರಿಚಯ ನನಗೆ ಇರುವುದಿಲ್ಲ. ದಾವಾ ಜಮೀನಿಗೆ ಸಂಬಂದಪಟ್ಟಂತೆ ವಾದಿಯರ ತಂದೆಯವರು ಹೊನ್ನಮ್ಮನವರ ಮಾಯವ್ವ ಗಂಡ ಲೇಟ್ ಗೋಣೆಪ್ಪ ಇವರ ವಿರುದ್ದ ಓ.ಎಸ್.ನಂ.119/1998 ರಲ್ಲಿ ದಾವೆ ಮಾಡಿದ ವಿಚಾರ ನನಗೆ ನನ್ನ ಗಂಡ ಹೇಳಿದ ಕಾರಣ ಗೊತ್ತಾಗಿರುತ್ತದೆ. ಈ ಕೇಸಿನಲ್ಲಿ ವಾದಿ ಕೇಳಿರುವ ಪರಿಹಾರಗಳನ್ನು ವಾದಿಯ ತಂದೆ ಸದರಿ ಓ.ಎಸ್.ನಂ.119/1998 ರಲ್ಲಿ ಕೇಳಿಕೊಂಡಿದ್ದರು ಎಂದರೆ ಸಾಕ್ಷಿಯು ನಮ್ಮನ್ನು ಪಕ್ಷಗಾರರನ್ನಾಗಿ ಮಾಡದೆ ಆ ದಾವೆಯನ್ನು ಹಾಕಿದ್ದರು ಎಂದು ನುಡಿದರು.

ನನ್ನ ವಿವಾಹವಾಗಿ 30 ವರ್ಷಗಳಾದವು. ಸದರಿ ದಾವೆ ವಜಾ ಆಯಿತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ತೀರ್ಪು ಈ ಕೇಸಿನ ವಾದಿಗೆ ಹಾಗೂ ನಮಗೆ ಅನ್ವಯಿಸುತ್ತದೆ ಎಂದರೆ ಸರಿಯಲ್ಲ. ಸಕ್ರಿ ಗಂಗಂಪ್ಪನ ಕಡೆಯಿಂದ 1 ನೇ ವಾದಿಯ ಗಂಡನಾದ ಗೋಣೆಪ್ಪನು ದಾವಾ ಜಮೀನನ್ನು ಖರೀದಿ ಹಿಡಿದಿದ್ದನು ಎಂದರೆ ಸರಿಯಲ್ಲ. ಆ ಕುರಿತು 1962 ರಲ್ಲಿ ಖರೀದಿ ಪತ್ರ ಆಗಿತ್ತು ಎಂದರೆ ಸರಿಯಲ್ಲ. ಅಲ್ಲಿಂದ ಇಲ್ಲಿಯವರೆಗೂ ದಾವಾ ಸ್ವತ್ತು 1 ನೇ ಪ್ರತಿವಾದಿ ಗಂಡನ ಸ್ವಾಧೀನದಲ್ಲಿ ಇದ್ದು ಈಗ ಆಕೆಯ ಸಾಧಿನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ತದನಂತರ 1963 ರಲ್ಲಿ ಸದರಿ ಗೋಣೆಪ್ಪ ಹಾಗೂ ಆತನ ಅಕ್ಕನ ಮಗ ಫಕೀರಪ್ಪ ಇವರು ದಾವಾ ಜಮೀನನ್ನು ಪಾಲು ವಿಭಾಗ ಮಾಡಿಕೊಂಡರು ಎಂದರೆ ಸರಿಯಲ್ಲ. ಸದರಿ ಪಾಲು ವಿಭಾಗ ಪತ್ರಕ್ಕೆ ಸಕ್ರಿ ಗಂಗಪ್ಪನ ಅಣ್ಣಂದಿರಾದ ಹನುಮಪ್ಪ ಮತ್ತು ಗಂಗಪ್ಪ ಸಾಕ್ಷಿದಾರರಾಗಿ ಸಹಿ ಮಾಡಿರುವರು ಎಂದರೆ ಸರಿಯಲ್ಲ.

ಪ್ರತಿವಾದಿಗೆ ಮಕ್ಕಳಿಲ್ಲದ ಕಾರಣ ಹಂಪವ್ವ ಎಂಬಾಕೆ ಪ್ರತಿವಾದಿಯನ್ನು ದತ್ತಕ ಪಡೆದಿರುವರು ಎಂದರೆ ಸರಿಯಲ್ಲ. ಪ್ರತಿವಾದಿ ಹಂಪಮ್ಮಳನ್ನು ದತ್ತುಪಡೆದುಕೊಂಡ ನಂತರ ಆಕೆಯನ್ನು ಹೊಳಿಬಸಪ್ಪನಿಗೆ ಮದುವೆ ಮಾಡಿಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನನ್ನು ಸದರಿ ಹೊಳಿಬಸಪ್ಪನಿಗೆ ಮಾಡಿಕೊಡಲಾಯಿತು ಎಂದರೆ ಸರಿಯಲ್ಲ. ಆತನ ಕಾಲ ನಂತರ ಸದರಿ ದಾವಾ ಜಮೀನು ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿ ಈಗ ಅದು ಆಕೆಯ ಸ್ವಾಧೀನದಲ್ಲಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಂಚಾಯತ್ ಉಥಾರ ಹಂಪಮ್ಮಳ ಹೆಸರಿಗೆ ಅಗಿರುವುದು ಎಂದರೆ ಸರಿಯಲ್ಲ. ಪಂಚಾಯತ್ ಉಥಾರದ ಪ್ರಕಾರ ದಾವಾ ಸ್ವತ್ತಿನ ನಂ.837/1 ಎಂದು ಇರುತ್ತದೆ ಎಂದರೆ ಸರಿಯಲ್ಲ. ಗೋಣೆಪ್ಪನ ಕಾಲದಿಂದ ಇಂದಿನ ವರೆಗೂ ದಾವಾ ಸ್ವತ್ತು ಪ್ರತಿವಾದಿ ಕಬ್ಜಾದ ವಹಿವಾಟಿನಲ್ಲಿರುವುದು ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್‌ನಲ್ಲಿ ಕಾಣಿಸಿದ 23 ಸೆಂಟ್ಸ್ ನಲ್ಲಿ ಬೇರೆ ಬೇರೆ ಜನರು ಮನೆ ಕಟ್ಟಿಕೊಂಡಿರುವರು ಎಂದರೆ ಸರಿಯಲ್ಲ. ಆ ವಿಚಾರ ಗೊತ್ತಿದ್ದರು

ಸುಳ್ಳು ಕೇಸು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಓ ಎಸ್ 199/1998 ರಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಆಯುಕ್ತರು ಸ್ಥಳ ಪರಿಶೀಲನೆ ಮಾಡಿ ವರದಿ ಸಲ್ಲಿಸಿರುವರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಸಕ್ರಿ ಗಂಗಪ್ಪನು ಇದೆ ದಾವ ಸ್ವತ್ತಿಗೆ ಸಂಬಧಿಸಿದಂತೆ ಘೋಷಣಾತ್ಮಕ ಪರಿಹಾರ ಕೇಳಿದ್ದನು ಎಂದರೆ ನನಗೆ ಗೊತ್ತಿಲ್ಲ. ಅದು ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಸದರಿ ದಾವೆಯ ಪ್ರತಿವಾದಿಗಳ ಪರವಾಗಿ ತೀರ್ಪಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸಕ್ರಿ ಗಂಗಪ್ಪ ಹಾಕಿದ ದಾವೆಯ ಕುರಿತು ನನ್ನ ಗಂಡ ಅಂಜಿನಪ್ಪನಿಗೆ ಮಾಹಿತಿ ಗೊತ್ತಿತ್ತು ಎಂದರೆ ಸರಿಯಲ್ಲ. ಆದರೂ ಪ್ರತಿವಾದಿಗಳ ಆಸ್ತಿಯನ್ನು ಕಬಳಿಸಲು ಈ ದಾವೆಯನ್ನು ಮಾಡಿದರು ಎಂದರೆ ಸರಿಯಲ್ಲ. ಈ ದಾವೆ ಮಾಡಲು ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ.

ನಮಗೆ ದಾವಾ ಸ್ವತ್ತಿನ ಮೇಲೆ ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೊಲಕ್ಕೆ ಕೂಲಿ ಕೆಲಸಕ್ಕೆ ಹೋಗುತ್ತೇನೆ ಎಂದರೆ ಸರಿ. ವಾದ ಪತ್ರದ ಪ್ಯಾರ ನಂ.6 ರಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನ ಕಬ್ಜಾದಲ್ಲಿರುವ ಕಾರಣ ಹರಕತ್ತು ಮಾಡುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸರಿಯಲ್ಲ. ಸಕ್ರಿ ಗಂಗಪ್ಪ ನನಗೆ ಮಾವನಾಗಬೇಕು. ಜಯಪ್ಪ ಬಿನ್ ಸಕ್ರಿ ಗಂಗಂಪ್ಪ ಇವರು ಸಹ ನನಗೆ ಮಾವನಾಗಬೇಕು. ಇವರಿಬ್ಬರು ಸೇರಿಕೊಂಡು ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಮೇಲ್ಮನವಿಯನ್ನು ಆರ್ ಎ ಸಿ ಆರ್ ನಂ. 20132014 ರಂತೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯನ್ನು ಎಂ.ಆರ್ ಆದೇಶ ನಂ.29/1997-98 ದಿನಾಂಕಃ20.04.1998 ರ ವಿರುದ್ಧ ಸಲ್ಲಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಮೇಲ್ಮನವಿಯ ನೋಟಿಸು ಪ್ರತಿವಾದಿಗಳಿಗೆ ಬಂದಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯಲ್ಲಿ ಪ್ರತಿವಾಗಳು ಅವಶ್ಯಕ ಪಕ್ಷಗಾರರಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೇಲ್ಮನವಿಯ ಆದೇಶದ ಪ್ರಕಾರ ತಾವೇ ಮಾಲೀಕರು ಎಂದು ಸುಳ್ಳು ಆದೇಶವನ್ನು ನನ್ನ ಮಾವಂದಿರು ಪಡೆದುಕೊಂಡಿರುವರು ಎಂದರೆ ಸರಿಯಲ್ಲ. ಸದರಿ ಆದೇಶದ ಆಧಾರ ಮೇಲೆ ಎಂ.ಆರ್ ಹೆಚ್ ನಂ. 50/2017-18 ಎಂದು ದಿನಾಂಕಃ 30.11.2017 ಇದು ಸರ್ಟಿಫಿಕೇಶನ್ ಆಗಿದೆ ಎಂದರೆ ಇದು ನನಗೆ ಗೊತ್ತಿಲ್ಲ.

ಮೊದಲಿನಿಂದಲೂ ಅಂದರೆ ನನ್ನ ಮಾವಂದಿರ ಕಾಲದಿಂದಲೂ ಪ್ರತಿವಾದಿಯರ ವಿರುದ್ಧ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸುಳ್ಳು ಕೇಸುಗಳನ್ನು ಹಾಕುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ. ಸದರಿ ಎ ಸಿ ಆದೇಶ ಕಾಯ್ದೆ ಪ್ರಕಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅದರ ಆಧಾರದ ಮೇಲೆ ಆಗಿರುವ ಮ್ಯುಟೇಶನ್ ಎಂಟ್ರಿ ಕೂಡ ಕಾನೂನು ಬಾಹಿರವಾಗಿದೆ ಎಂದರೆ ಸರಿಯಲ್ಲ. ಖರೀದಿ ಮಾಡಿದ ದಿನದಿಂದ ಇಂದಿನವರೆಗೂ 1 ನೇ ಪ್ರತಿವಾದಿ ಹಾಗೂ ಅವರ ವಾರಸುದಾರರು ದಾವಾ ಜಮೀನಿನ ಮಾಲ್ಕಿ ಹಾಗೂ ಸ್ವಾಧೀನ ಹಕ್ಕನ್ನು ಹೊಂದಿರುವರು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

O.S. 208/2013
P.W.1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

04.07.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**